# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್,
ಝೆನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:-02.07.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾ.ರಾನಗರ ವಲಯ
2. ಶ್ರೀ.ಜಿ.ಮೋಹನ್‌ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ-73ಕೊಟ್ಟಿಗೆಪಾಳ್ಯ
3. ಶ್ರೀ.ಪ್ರಜ್ವಲ್, ಸಹಾಯಕ ಇಂಜಿನೀಯರ್, ಲಗ್ಗೆರೆ ಉಪ ವಿಭಾಗ.
4. ಶ್ರೀ.ವಿಶ್ವನಾಥ್ ನಾಯ್ಕ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ,
5. ಶ್ರೀ.ಚಿತ್ರಿತ.ಬಿ. ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
6. ಶ್ರೀ.ಮೋಹನ್ ಕುಮಾರ್, ಸಹಾಯಕ ಅಭಿಯಂತರರು, ಬೆಸ್ಕಾಂ.
7. ಶ್ರೀ.ಕೇಶವ ಮೂರ್ತಿ, ಕಿರಿಯ ಅಭಿಯಂತರರು, ಬೆಸ್ಕಾಂ.
8. ವಾರ್ಡ್ ಮಾರ್ಷಲ್‌ಗಳು
9. ಸೂಪರ್‌ವೈಸರ್‌ಗಳು
10. ಸಂಘ ಸಂಸ್ಥೆಗಳ ಪದಾಧಿಕಾರಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | 10 ಮತ್ತು 11ನೇ ಬ್ಲಾಕ್ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು, ಹಾಗೂ ಹೂಳು ಬಿದಿದ್ದು, ಇವುಗಳನ್ನು ದುರಸ್ಥಿಗೊಳಿಸಿ ಡಾಂಬರೀಕರಣಗೊಳಿಸುಂತೆ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಪೂರ್ಣಗೊಂಡಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 2 | 11ನೇ ವಿಭಾಗದಲ್ಲಿ ತಡೆಗೋಡೆಗಳು ಕುಸಿದು ಬಿದಿದ್ದು, ತಡೆಗೋಡೆ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂಡಿ |
| 3 | 10ನೇ ಮತ್ತು 11ನೇ ವಿಭಾಗದಲ್ಲಿ ಉದ್ಯಾನವನ ಮತ್ತು ಆಟದ ಮೈದಾನ ಅಭಿವೃದ್ದಿಗೊಳಿಸುವಂತೆ ಮತ್ತು ಶುಚಿತ್ವವನ್ನು ಕಾಪಾಡುವಂತೆ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ತೋಟಗಾರಿಕೆ |
| 4 | ವಾರ್ಡ್ ವ್ಯಾಪ್ತಿಯಲ್ಲಿ ಹಸಿ ಮತ್ತು ಒಣ ಕಸವನ್ನು ಎಲ್ಲೆಂದರಲ್ಲಿ ಸುರಿಯುತ್ತಿದ್ದಾರೆ ಮತ್ತು ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿರುತ್ತದೆ. | ಪ್ರಕೃತಿ ಅಸೋಸಿಯೇಟ್ಸ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ |

Scanned with CamScanner

| | | | | |
|---|---|---|---|---|
| 5 | ಹಲವು ರಸ್ತೆಗಳಲ್ಲಿ ಬಾಗಿರುವ ಒಣಗಿರುವ ಮರಗಳ ರೆಂಬೆಗಳನ್ನು ತೆಗೆಸಲು ಕ್ರಮ ವಹಿಸುವಂತೆ ಮತ್ತು ಹಲವು ರಸ್ತೆ ಬೀದಿ ದೀಪಗಳ ಹಾಳಾಗಿರುವಂತೆ ತಿಳಿಸಿರುತ್ತಾರೆ. ಹಾಗೂ ವಿದ್ಯುತ್ ಅಡಚಣೆ ಪದೇ ಪದೇ ಉಂಟಾಗಿರುವುದಾಗಿ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 6 | ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪೈಪ್‌ಲೈನ್‌ಗಳನ್ನು ಹಾಕಿದ್ದು, ಇಂದಿರಾ ಪಾರ್ಕ್,ವಾಟರ್ ಪ್ಲಾಂಟ್‌ನ ಬಳಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 7 | ಕೆಂಚಮ್ಮ ಚೌಟರಿ, 40 ಅಡಿರಸ್ತೆಗಳಲ್ಲಿ ಪಾಟ್‌ಹೋಲ್ಸ್‌ಗಳನ್ನು ಮುಚ್ಚಿರುವುದಿಲ್ಲ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 8 | 6ನೇ ಕ್ರಾಸ್, ಶ್ರೀನಿವಾಸನಗರ ರಸ್ತೆಗಳಲ್ಲಿ ಕಲ್ವರ್ಟ್‌ಗಳು ತುಂಬಿದ್ದು, ಅದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 9 | 13ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆಗಳಲ್ಲಿ ಮರದ ಕೊಂಬೆಗಳನ್ನು ಕತ್ತರಿಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 10 | ಮಾಗಡಿ ಮುಖ್ಯರಸ್ತೆಯಿಂದ ಸೊಲ್ಲಾಪುರದಮ್ಮ ದೇವಸ್ಥಾನದ ವರೆಗೂ, 3ನೇ ಕ್ರಾಸ್, ಸೇಟು ಅಂಗಡಿ ಹತ್ತಿರ, ಸ್ಲಿಲ್ವ್‌ಗಳನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. | ಸುಮಿತ್ರಮ್ಮ ಮತ್ತು ನವೀನ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 11 | 6ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆ, ಶನಿಮಹಾತ್ಮ ದೇವಸ್ಥಾನದ ಬಳಿ ಕಲ್ಲುಗಳು ಬಿದಿದ್ದು, ಅದನ್ನು ತೆಗೆಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 12 | ವಾರ್ಡ್ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿ ಹೊಸದಾದ ರಸ್ತೆಗಳನ್ನು ನಿರ್ಮಾಣ ಮಾಡುವಂತೆ ತಿಳಿಸಿರುತ್ತಾರೆ. | ರಾಣಿ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 13 | ಶ್ರೀನಿವಾಸನಗರದ ರಸ್ತೆಗಳಲ್ಲಿ ಸ್ಲಿಲ್ವ್‌ಗಳು ತುಂಬಿದ್ದು ಅದನ್ನು ತೆರವುಗೊಳಿಸುವಂತೆ ತಿಳಿಸಿರುತ್ತಾರೆ. | ರಾಣಿ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 14 | ಶ್ರೀನಿವಾಸನಗರದ ರಸ್ತೆಗಳಲ್ಲಿ ರಸ್ತೆ ಗುಂಡಿಗಳು ಬಿದಿದ್ದು, ರಸ್ತೆ ಗುಂಡಿ ಮುಚ್ಚುವಂತೆ ಕೋರಿರುತ್ತಾರೆ. | ರಾಣಿ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 15 | ಶ್ರೀನಿವಾಸನಗರದ ರಸ್ತೆಗಳಲ್ಲಿ ಸ್ಲಿಲ್ವ್‌ಗಳು ತುಂಬಿದ್ದು ಅದನ್ನು ತೆರವುಗೊಳಿಸುವಂತೆ ತಿಳಿಸಿರುತ್ತಾರೆ. | ರಾಣಿ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 16 | ಟಿ.ಎನ್.ಟಿ ಲೇಔಟ್‌ನಲ್ಲಿ ಸ್ಲಿಲ್ವ್‌ಗಳು ಮತ್ತು ರಸ್ತೆ ಗುಂಡಿಗಳು ಅಧಿಕವಾಗಿದ್ದು, ಅದನ್ನು ಸರಿಪಡಿಸುವಂತೆ ತಿಳಿಸಿರುತ್ತಾರೆ. | ಜಯದೇವಪ್ಪ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |

Scanned with CamScanner

| | | | | |
|---|---|---|---|---|
| 17 | ಮೆಟ್ರೋ ಕ್ವಾಟ್ರಸ್‌ನಲ್ಲಿ ಹೊಸದಾಗಿ ಮೋರಿಯನ್ನು ನಿರ್ಮಿಸುವಂತೆ ಮತ್ತು ಹೂಳು ತೆಗೆಯುವಂತೆ ಕೋರಿರುತ್ತಾರೆ. | ಆನಂದ್ & ಉಮೇಶ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 18 | 9ನೇ ಬ್ಲಾಕ್, 12ನೇ ಮೈನ್‌ನಲ್ಲಿ ಮರದ ಕೊಂಬೆಗಳು ರಸ್ತೆಗೆ ಬಾಗಿದ್ದು, ಅದನ್ನು ತೆಗೆಸುವಂತೆ ತಿಳಿಸಿರುತ್ತಾರೆ. | ಚೆರಾಮಣ್ಣ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಣ್ಯ ಇಲಾಖೆ |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner